ಮುರುಗನ್ ಪತ್ತೆಯೇ ಇರಲಿಲ್ಲವಂತೆ. ಅದನ್ನೆಲ್ಲಾ ಹೇಳಿ ತಂದೆತಾಯಿ ಒತ್ತಾಯಿಸುತ್ತಿರುವುದನ್ನು ಹೇಳಿಕೊಂಡಿದ್ದಳು. ನಮ್ಮ ತಾತನಿಗೆ ದೂರದ ಸಂಬಂಧ ಅವಳು. ಮದುವೆ ಆದ್ಮೇಲೆ ನಿಮ್ಮೊಂದಿಗೆ ಚೆನ್ನಾಗಿರ್ತೀನಿ ಎಂತಲೂ ಹೇಳಿದ್ದಳು.' ಬಾಲನ್‌ಗೆ ಗಂಟಲು ಕಟ್ಟಿ ಬರುತ್ತಿತ್ತು. ಹೌದು, ಮನಸ್ಸನ್ನು ಅದೆಷ್ಟು ನಿಗ್ರಹಿಸಿಕೊಂಡಿರಬೇಕು ಈತ.

ಮುಂದೆ ಬಾಲನ್ ಹೇಳಿದ್ದಿಷ್ಟು. ಮದುವೆಯಾದ ನಂತರ ಇವನಿಗಾಗಿ ಅಂಗಡಿಯನ್ನು ಇಟ್ಟುಕೊಟ್ಟರಂತೆ. ಅತ್ತೆಮಾವ ತುಂಬಾ ಗೌರವದಿಂದಲೇ ನಡೆಸಿಕೊಳ್ಳುತ್ತಿದ್ದರಂತೆ. ಆದರೆ ಲಲಿತಾಗೆ ಮಾತ್ರ ಮುರುಗನ್‌ನನ್ನು ಮರೆಯಲಾಗುತ್ತಲೇ ಇರಲಿಲ್ಲವಂತೆ. ಇವನ ಹತ್ತಿರ ಹೇಳಿ ಕಣ್ಣೀರು ಹಾಕುತ್ತಿದ್ದಳಂತೆ. ಅವರಿಬ್ಬರ ಮದುವೆಗೆ ಅಡ್ಡ ಬಂದಿದ್ದು ಜಾತಿಯ ಕಾರಣವೇ ಆಗಿತ್ತು. ಅವನ ತಾಯಿತಂದೆಯರು ಈ ಮದುವೆಗೆ ಒಪ್ಪಿಗೆ ಕೊಡಲೇ ಇಲ್ಲವಂತೆ. ಜೊತೆಗೆ ಒಂದು ವೇಳೆ ಮಾತಿಗೂ ಮೀರಿ ಮದುವೆಯಾದರೆ ಸಂಬಂಧವನ್ನೆ ಕಡಿದುಕೊಳ್ಳುವ ಮಾತನಾಡಿದರಂತೆ. ಆ ಬೇಸರದಿಂದಲೆ ಮುರುಗನ್, ಫೋನಿಗೂ ಸಿಗದೆ ಲಲಿತಳಿಂದ ದೂರವಾಗಿದ್ದನಂತೆ. ಆದರೆ ಇತ್ತೀಚೆಗೆ ಮುರುಗನ್‌ನ ತಂದೆ ತೀರಿಕೊಂಡಮೇಲೆ ಅಮ್ಮನನ್ನು ಹೇಗೋ ಒಪ್ಪಿಸಿದ್ದಾನಂತೆ. ಮದುವೆಯಾಗುವಂತೆ ಕೇಳಿ ಲಲಿತಾಳಿಗೆ ಪತ್ರ ಬರೆದಿದ್ದನ್ನು ಬಾಲನ್‌ಗೆ ತೋರಿಸಿದ್ದಳು. 'ನಿನ್ನನ್ನು ಮರೆಯಲು ಸಾಧ್ಯವಿಲ್ಲ. ನಿನ್ನನ್ನಲ್ಲದೆ ಬೇರೆ ಯಾರನ್ನೂ ಮದುವೆಯಾಗಲಾರೆ' ಎಂದೆಲ್ಲಾ ಪತ್ರದಲ್ಲಿ ಇದ್ದುದನ್ನು ಬಾಲನ್ ಕಣ್ಣಾರೆ ನೋಡಿದ್ದ. ಕಂಡ ಕನಸುಗಳೆಲ್ಲಾ ಕಮರಿಹೋಗುತ್ತಿರುವ ಸುಳಿವು ಸಿಕ್ಕು ಎರಡು ದಿನವಿಡೀ ನಿದ್ದೆ ಮಾಡಲಾಗದೆ, ಯಾರೊಂದಿಗೂ ಹೇಳಿಕೊಳ್ಳಲಾಗದೆ ಪರಿತಪಿಸಿದನಂತೆ.

'ನನ್ನನ್ನು ಕ್ಷಮಿಸಿಬಿಡಿ... ನನಗೆ ಮುರುಗನ್‌ನನ್ನು ಮರೆಯೋಕಾಗೋಲ್ಲ. ಮನಸ್ಸಿನಲ್ಲಿ ಅವರನ್ನಿಟ್ಟುಕೊಂಡು ನಿಮಗೆ ಮೋಸ ಮಾಡೋಕೆ ಅಂತರಾತ್ಮ ಒಪ್ಪುತ್ತಿಲ್ಲ' ಎಂದು ಕಣ್ಣೀರು ಹಾಕಿಕೊಂಡಳಂತೆ. ಬಾಲನ್ ಒಪ್ಪಿಗೆ ಕೊಟ್ಟರೆ ಮಾತ್ರ ಮುರುಗನ್‌ನನ್ನು ಮದುವೆಯಾಗುವುದಾಗಿ ಹೇಳಿದಳಂತೆ. ಇಷ್ಟೆಲ್ಲಾ ಹೇಳಿಕೊಳ್ಳುವಾಗ ತನ್ನ ಸ್ವರವನ್ನು, ಭಾವನೆಗಳನ್ನು ನಿಯಂತ್ರಣದಲ್ಲಿಡಲು ಬಾಲನ್ ಎಷ್ಟು ಕಷ್ಟಪಡುತ್ತಿದ್ದಾನೆಂಬುದು ನನ್ನ ಅರಿವಿಗೆ ಬಂದಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ಈತ ಹೇಗೆ ಎದುರಿಸಿರಬಹುದು... ಮದುವೆಯಾದವನೊಂದಿಗೆ ಪ್ರಿಯಕರನ ವಿಷಯ ತಿಳಿಸಿ ಮತ್ತೆ ಅವನೊಂದಿಗೆ ಮದುವೆಯ ಪ್ರಸ್ತಾಪ... ಎಷ್ಟೆಷ್ಟೋ ಕೊಲೆಗಳೇ ಆಗಿಬಿಡುತ್ತವೆ ಈ ವಿಷಯದಲ್ಲಿ. ಕೇವಲ ಅನುಮಾನದ ಎಳೆ ಹಿಡಿದೇ ಸಿಟ್ಟಿನ ಕೈಗೆ ಬುದ್ಧಿ ಕೊಟ್ಟಿರುವವರು ಎಷ್ಟೋ ಮಂದಿ. ಏರು ಜವ್ವನದ ಯುವಕ ಬಾಲನ್ ಹೇಗೆ ಪ್ರತಿಕ್ರಿಯಿಸಿದ್ದಾನು. ನನ್ನ ಅರಿವಿನ ವ್ಯಾಪ್ತಿಯನ್ನು ಮೀರಿದ್ದಾನೆಯೆ ಅವನು. ಅವನ ಬೆನ್ನು ತಟ್ಟುತ್ತಾ ಮುಂದೇನು ಎನ್ನುವಂತೆ ಅವನೆಡೆಗೆ ನೋಟ ಹರಿಸಿದ್ದೆ.

'ಲಲಿತಳದು ಏನೂ ತಪ್ಪಿಲ್ಲ ಅಮ್ಮಾವ್ರೆ... ಎಲ್ಲವನ್ನೂ ಅವಳು ಮೊದಲೇ ಹೇಳಿಬಿಟ್ಟಿದ್ದಳಲ್ಲ. ನನಗೇನೂ ಮೋಸ ಮಾಡುವ ಮನಸ್ಸಲ್ಲ ಅವಳದು. ಇಂತಹ ಪರಿಸ್ಥಿತಿಯಲ್ಲಿ ಬಲವಂತವಾಗಿ ನನ್ನ ಜೊತೆ ಬಾಳ್ವೆ ಮಾಡು ಅಂತ ಹೇಗೆ ಹೇಳಲಿ. ವಿಷಯ ತಿಳಿದಿದ್ದ ನಾನು ಮದುವೆಗೆ ಮೊದಲೇ ಯೋಚಿಸಬೇಕಿತ್ತು. ಈಗಲೂ ಅವಳು ನನ್ನ ಒಪ್ಪಿಗೆಯನ್ನೇ ಕೇಳುತ್ತಿದ್ದಾಳೆ. ಬೇಡವೇ ಬೇಡವೆಂದು ನಾನು ಹಟ ಹಿಡಿಯಬಹುದು. ಆದರೆ ನಮ್ಮ ಸಂಸಾರ ಚೆನ್ನಾಗಿ ಸಾಗುತ್ತದೆಯೆ... ಅವಳ ಮನಸ್ಸು ಸರಿಯಿರುತ್ತದೆಯೆ... ದೇಹವೆಲ್ಲೋ, ಮನಸ್ಸೆಲ್ಲೋ ಎಂಬ ಜೀವನ ಹಿತವಾಗಿರುತ್ತದೆಯೆ... ಅವರಾದರೂ ಸುಖವಾಗಿರಲಿ ಅಂತ ನಿರ್ಧರಿಸಿ ಅವರಿಬ್ಬರ